# ಅಧ್ಯಾತ್ಮ ಈಟರಿ

ಸಿಟಿ ಜನರ ಆಧ್ಯಾತ್ಮಿಕ ಹಸಿವನ್ನು ತಣಿಸಲೆಂದೇ ಬಂದಂತಿದ್ದ 'ಅಧ್ಯಾತ್ಮ ಈಟರಿ' ಎಂಬ ಉಪಾಹಾರ ಗೃಹ ಬಹು ಬೇಗನೆ ಜನಪ್ರಿಯವಾದ್ದರಲ್ಲಿ ಆಶ್ಚರ್ಯವಿಲ್ಲ. 'ಅಧ್ಯಾತ್ಮ ಈಟರಿ' ಒಳ್ಳೇ ಹೆಸರು; ಬನ್ನಿರಿ, ಕುಳ್ಳಿರಿ ಅಧ್ಯಾತ್ಮ ತಿನ್ನಿರಿ!' ಎಂಬ ಅರ್ಥ ಕೊಡುವಂಥದು. 'ಅಧ್ಯಾತ್ಮ ತಿನ್ನಿರಿ' ಎಂದೂ ಕೊಡಬಹುದಿತ್ತು, ಆದರೆ ಅದಕ್ಕೆ ಈಟರಿಯಷ್ಟು ಆಧುನಿಕ ವಾಸನೆಯಿಲ್ಲ. ಸಿಟಿ ಜನರಿಗೆ ಅಧ್ಯಾತ್ಮವೂ ಬೇಕು, ಆಧುನಿಕತೆಯೂ ಬೇಕು. 'ಅಧ್ಯಾತ್ಮ ಈಟರಿ' ಎರಡನ್ನೂ ನೀಡುತ್ತದೆ. ಅಲ್ಲಿ ಹೋಗಿ ತಿನ್ನದೆ ಇದ್ದರೆ ಅದೇನೋ ನಷ್ಟವಾಗುತ್ತದೆ ಎಂಬ ಭಾವನೆ ಎಲ್ಲರಲ್ಲಿಯೂ ಇದೆ. ನಾನೂ ಅದಕ್ಕೆ ಹೊರತಾದವನಲ್ಲ, ಆದ್ದರಿಂದ ಸೀಟ್ ಬುಕ್ ಮಾಡೋಣವೆಂದು ಫೋನ್ ಮಾಡಿದೆ.

"ಅಧ್ಯಾತ್ಮ ಈಟರಿ, ನಮಸ್ಕಾರ್, ಸತ್ ಶ್ರೀ ಅಕಾಲ್, ಗುಡ್ ಮಾರ್ನಿಂಗ್, ನಮೋ ಅರ್ಹತೇ, ಸುಬಾನಲ್ಲಾ..."

"ಗೊತ್ತಾಯ್ತು, ಗೊತ್ತಾಯ್ತು. ಥೇಂಕ್ಸ್. ನನಗೊಂದು ರಿಸರ್ವೇಶನ್ ಬೇಕಿತ್ತು. ನಾಳೆ ಬೆಳಿಗ್ಗೆ 9 ಗಂಟೆಗೆ ಒಂದು ಟೇಬಲ್."

"ಹೆಸರು, ಮೊಬೈಲ್ ನಂಬರು?"

ಹೇಳಿದೆ.

"ಒನ್ ಪ್ಲಸ್? ಥ್ರೀ ಪ್ಲಸ್? ಫೈವ್ ಪ್ಲಸ್?"

"ಅರ್ಥವಾಗಲಿಲ್ಲ."

"ಇಬ್ಬರು ಗ್ರಾಹಕರ ಟೇಬಲಿನಿಂದ ಶುರುವಾಗುತ್ತದೆ, ಇನ್ ಮಲ್ಟಿಪ್ಲ್ಸ್ ಆಫ್ ಟೂ."

"ನಾನೊಬ್ಬನೇ ಇರುವುದು."

"ಹಾಗಿದ್ದರೆ ಇಬ್ಬರ ಟೇಬಲ್ ತೆಗೊಳ್ಳಿ."

"ವ್ಹಾಟ್ ಈಸ್ ದ ಕ್ಯಾಚ್?"

"ಒಂದು ಪ್ಲೇಟ್ ಆರ್ಡರ್ ಮಾಡಿದರೆ ಇಬ್ಬರ ಬಿಲ್ ಕೊಡಬೇಕಾಗುತ್ತದೆ."

"ಇದೆಂಥಾ ಅಧ್ಯಾತ್ಮ!?"

"ಇದರಲ್ಲೊಂದು ವೇದಾಂತ ಇದೆ."

"ಏನು ವೇದಾಂತ?"

"ಮನುಷ್ಯ ಯಾವತ್ತೂ ಒಬ್ಬನೇ ಅಲ್ಲ ಅಂತ."

"ನೀವು ದ್ವೈತ?"

"ನಾವು ಮೂವರು ಆಚಾರ್ಯರನ್ನೂ ಗೌರವಿಸುತ್ತೇವೆ ಸರ್, ಮೂವರ ಫೋಟೊಗಳನ್ನೂ ಹಾಕಿದ್ದೇವೆ."

"ಬುಕ್ ಮಾಡಿ."

"ಟೇಬಲ್ ನಂಬರ್ ಹತ್ತು. ನಾಳೆ ಬೆಳಿಗ್ಗೆ 9ಕ್ಕೆ. ಕಾಲಾವಕಾಶ ಒಂದು ಗಂಟೆ."